ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 09-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಸಿಂಗ್ ಚೌವ್ಹಾಣ್ ರವರಿಗೆ ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಪದವಿಯ ಅಧಿಕಾರ ಗ್ರಹಣದ ಪ್ರಮಾಣ ವಚನ.<br>ಪ್ರಮಾಣ ವಚನ ಬೋಧನೆ:<br>ಶ್ರೀ ವಜೂಭಾಯಿ ವಾಲಾ,<br>ಕರ್ನಾಟಕದ ಮಾನ್ಯ ರಾಜ್ಯಪಾಲರು | **10-03-2015**<br>ಮಂಗಳವಾರ<br>ಬೆಳಿಗ್ಗೆ<br>**9-30** ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ರಾಜಭವನ,<br>ರಾಜಭವನ ರಸ್ತೆ,<br>ಬೆಂಗಳೂರು |
| 2. | **Welcome Address by Chairman, Karnataka State Bar Council to Shri Justice Raghavendra Singh Chauhan, New Judge of Karnataka** | **10-03-2015**<br>**Tuesday**<br>**10.30am** | **Court Hall No.1, Principal Bench of High Court of Karnataka.** |
| 3 | ಚಿತ್ರರಂಗ ಹಾಗೂ ಕಿರುತೆರೆ ನಿರ್ಮಾಪಕರು ಹಾಗೂ ನಿರ್ದೇಶಕರ ಸಭೆ<br>ಅಧ್ಯಕ್ಷತೆ:<br>ಶ್ರೀಮತಿ ವಿಜಯಲಕ್ಷ್ಮಿ ಅರಸ್,<br>ಅಧ್ಯಕ್ಷರು<br>ಶ್ರೀ ಕಂಠೀರವ ಸ್ಟುಡಿಯೋಸ್, ಬೆಂಗಳೂರು | **10-3-2015**<br>ಮಂಗಳವಾರ<br>ಬೆಳಿಗ್ಗೆ<br>**11-00** ಗಂಟೆಗೆ | ಶ್ರೀ ಕಂಠೀರವ ಸ್ಟುಡಿಯೋಸ್,<br>ಕಂಠೀರವನಗರ,<br>ನಂದಿನಿ ಲೇಔಟ್,<br>ಬೆಂಗಳೂರು **-560 096** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಖಾಸಗಿ ಗ್ರಂಥಾಲಯಗಳಿಗೆ ಅನುದಾನ ಬಿಡುಗಡೆ

**ಬೆಂಗಳೂರು, ಮಾರ್ಚ್ 9, (ಕರ್ನಾಟಕ ವಾರ್ತೆ)**

ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ 2014-15 ಸಾಲಿಗೆ ರಾಜ್ಯದ ಖಾಸಗಿ/ಅನುದಾನಿತ ಗ್ರಂಥಾಲಯಗಳಿಗೆ ಅನುದಾನ ಬಿಡುಗಡೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ದಾಖಲೆಗಳೊಂದಿಗೆ ತಮ್ಮ ಸಮೀಪದ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಮುಖ್ಯ ಗ್ರಂಥಾಲಯಾಧಿಕಾರಿಗಳನ್ನು ಸಂಪರ್ಕಿಸಿ ಅವರಿಂದ ತಮ್ಮ ಗ್ರಂಥಾಲಯಗಳ ತಪಾಸಣೆ ಕೈಗೊಂಡ ನಂತರ ದಿನಾಂಕ 16-03-2015 ರ ಒಳಗಾಗಿ 2014-15 ನೇ ಸಾಲಿಗೆ ಅನುದಾನ ಕೋರಿಕೆ ಮನವಿ ಪತ್ರವನ್ನು ಸಂಬಂಧಪಟ್ಟ ಮುಖ್ಯಗ್ರಂಥಾಲಯಾಧಿಕಾರಿಗಳ ಸಕ್ಷಮ ಪ್ರಾಧಿಕಾರದಿಂದ ನಿರ್ದೇಶನಾಲಯ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಕಚೇರಿಗೆ ಸಲ್ಲಿಸುವಂತೆ ಸೂಚಿಸಿದೆ.
ಬಾಬು:ಜಿಪಿಆರ್.

# ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿಗೆ ಪ್ರಯತ್ನ

## - ಅಧ್ಯಕ್ಷರ ಭರವಸೆ

**ಬೆಂಗಳೂರು, ಮಾರ್ಚ್ 9, (ಕರ್ನಾಟಕ ವಾರ್ತೆ):**

**ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 1.20 ಲಕ್ಷ ಪೌರ ಕಾರ್ಮಿಕರಿಗಾಗಿ ಕೆಲಸ, ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆಯನ್ನು ಕಲ್ಪಿಸುವ ಸಂಬಂಧ ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಸಚಿವರೊಂದಿಗೆ ಈಗಾಗಲೇ ಚರ್ಚಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ನಾರಾಯಣ ಅವರು ತಿಳಿಸಿದರು.**

**ಅವರು ಇಂದು ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ರಾಜ್ಯದಲ್ಲಿ ಪೌರಕಾರ್ಮಿಕರಿಗೆ ಗುತ್ತಿಗೆದಾರರು, ಸರಿಯಾದ ಸಮಯಕ್ಕೆ ವೇತನ ನೀಡುತ್ತಿಲ್ಲ, ಗುತ್ತಿಗೆದಾರರ ವಂಚನೆಗೆ ಒಳಗಾದ ಇವರಿಗೆ ಹರಿಯಾಣ ಸರ್ಕಾರದ ಮಾದರಿಯಲ್ಲೇ ಗುತ್ತಿಗೆ ಪದ್ದತಿಯನ್ನು ರದ್ದು ಪಡಿಸಿ ಆಯಾ ಸ್ಥಳೀಯ ಸಂಸ್ಥೆಗಳಿಂದಲೇ ವೇತನ ಪಾವತಿ ಮಾಡುವಂತೆ ಸರ್ಕಾರವನ್ನು ಕೋರಲಾಗಿದೆ ಎಂದು ಹೇಳಿದರು.**

**ರಾಜ್ಯದಲ್ಲಿ ಸುಮಾರು 10 ಲಕ್ಷ ಸಫಾಯಿ ಕರ್ಮಚಾರಿಗಳನ್ನು ಹೊಂದಿದೆ. ಅವರ ಶಿಕ್ಷಣ ಮಟ್ಟ ಕೇವಲ ಶೇ. 5 ರಷ್ಟು ಇದ್ದು ಉಳಿದ ಶೇ. 95 ರಷ್ಟು ಅನಕ್ಷರಸ್ಥರಾಗಿದ್ದಾರೆ. ಅವರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತು ತಲುಪುತ್ತಿಲ್ಲ ಮತ್ತು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದಿಂದ ಬರುವ ಹಣ ಸರಿಯಾಗಿ ಬಳಕೆಯಾಗದೇ ಮರಳಿ ಹೋಗುತ್ತಿದೆ ಎಂದು ಅಧ್ಯಕ್ಷರು ತಿಳಿಸಿದರಲ್ಲದೆ ಪೌರಕಾರ್ಮಿಕರ ಮಕ್ಕಳಿಗೆ ಸರ್ಕಾರಿ ವಸತಿ ಶಾಲೆ, ಮೂರಾರ್ಜಿ ದೇಸಾಯಿ ಹಾಗೂ ನವೋದಯ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿಕೊಡಲು ಯತ್ನಿಸಲಾಗುವುದು ಎಂದು ಭರವಸೆ ನೀಡಿದರು.**

**ಸಫಾಯಿ ಕರ್ಮಚಾರಿಗಳ ಅಭಿವೃದ್ಧಿಗಾಗಿ ರಾಜ್ಯದಲ್ಲಿ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ಸ್ಥಾಪಿಸಲು 2015-16 ನೇ ಮುಂಗಡ ಪತ್ರದಲ್ಲಿ ಘೋಷಣೆ ಮಾಡಲು ಮುಖ್ಯಮಂತ್ರಿಗಳನ್ನು ಕೋರಲಾಗಿದೆ ಎಂದು ಸಚಿವರು ತಿಳಿಸಿದರು.**

ರಾಜ್ಯ ಮಟ್ಟದಲ್ಲಿ ಪೌರಕಾರ್ಮಿಕರ ಸ್ಥಿತಿಗತಿಗಳ ಅಧ್ಯಯನ ಕುರಿತು ಎರಡು ದಿನಗಳ ಕಾರ್ಯಾಗಾರವನ್ನು ಶ್ರೀಘ್ರದಲ್ಲಿಯೇ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಬಾಬು:ಸೌಮ್ಯ:ಜಿಪಿಆರ್

<u>ವಾರ್ತಾ ವಿಶೇಷ:</u>

<u>ರಾಜ್ಯ ಸರ್ಕಾರಿ ನೌಕರರಿಗೆ ವರದಾನ :</u>

# ‘ಜ್ಯೋತಿ ಸಂಜೀವಿನಿ’ ಯೋಜನೆ

ಗಂಭೀರ ಹಾಗೂ ಮಾರಣಾಂತಿಕ ಖಾಯಿಲೆಗಳಿಗೆ ತುತ್ತಾದ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಭಿತ ಸದಸ್ಯರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತೃತೀಯ ಹಂತದ ಚಿಕಿತ್ಸೆಗಾಗಿ ಶಸ್ತ್ರಚಿಕಿತ್ಸೆ ಥೆರಫಿಗಳು ಮತ್ತು ವೈದ್ಯಕೀಯ ಚಿಕಿತ್ಸೆಗಳನ್ನು ಒಳಗೊಂಡಂತೆ ಉತ್ತಮ ಗುಣಮಟ್ಟದ ವೈದ್ಯಕೀಯ ನೆರವನ್ನು ಒದಗಿಸುವುದು ಜ್ಯೋತಿ ಸಂಜೀವಿನಿ ಯೋಜನೆಯ ಉದ್ದೇಶವಾಗಿದೆ.

ಯೋಜನೆಯಲ್ಲಿ ಒಳಗೊಳ್ಳುವ ಕಾಯಿಲೆಗಳು ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರ ಪಿಂಡದ ಖಾಯಿಲೆ, ಸುಟ್ಟ ಗಾಯ, ಅಪಘಾತ ನವಜಾತ ಶಿಶುಗಳಿಗೆ ಸಂಬಂಧಿಸಿದ ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆಯ ಸೌಲಭ್ಯ ದೊರೆಯುತ್ತದೆ.

ಮೇಲೆ ತಿಳಿಸಲಾದ ಏಳು ತರಹದ ಅಘಾತಕಾರಿ ಕಾಯಿಲೆಗಳಿಗೆ ಸಂಬಂಧಿಸಿದ 449 ಬಗೆಯ ಶಸ್ತ್ರ ಚಿಕಿತ್ಸೆಗಾಗಿ ಯೋಜನೆಯಡಿಯಲ್ಲಿ ಗುರುತಿಸಲಾಗಿದ್ದು ಈ ಎಲ್ಲ ಚಿಕಿತ್ಸೆಗಳಿಗೆ ನೋಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಮೂಲಕ ಉಚಿತವಾಗಿ ಒದಗಿಸಲಾಗುತ್ತದೆ.

## <u>ಫಲಾನುಭವಿಗಳು ಮತ್ತು ಯೋಜನೆಯ ವ್ಯಾಪ್ತಿ :</u>

“ಫಲಾನುಭವಿಗಳು” ಎಂದರೆ ರಾಜ್ಯ ಸರ್ಕಾರದ ಎಲ್ಲಾ ಸರ್ಕಾರಿ ನೌಕರರು ಮತ್ತು ಸರ್ಕಾರದ ಸೇವಾ ನಿಯಮಾವಳಿಗಳ ಅಡಿಯಲ್ಲಿ ಬರುವ ಅವರ ಕುಟುಂಬದ ಅವಲಂಭಿತ ಸದಸ್ಯರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ನಿಯಮಾವಳಿ–1963 ರ ನಿಯಮ 2(1)ರ(i) (ii) ಮತ್ತು (iii) ರನ್ವಯ ಸರ್ಕಾರಿ ನೌಕರರ ಕುಟುಂಬದ ಅವಲಂಭಿತ ಸದಸ್ಯರನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿರುತ್ತದೆ.

ಸರ್ಕಾರಿ ನೌಕರನ ಪತ್ನಿ ಅಥವಾ ಪತಿ, ಸರ್ಕಾರಿ ನೌಕರರ ತಂದೆ ಮತ್ತು ತಾಯಿ (ಮಲತಾಯಿ ಒಳಗೊಂಡಂತೆ) ಇವರು ಸರ್ಕಾರಿ ನೌಕರನ ಜೊತೆಯಲ್ಲಿ ಸಾಮಾನ್ಯವಾಗಿ ವಾಸವಿರತಕ್ಕದ್ದು ಮತ್ತು ಇವರ ಮಾಸಿಕ ಆದಾಯ ಒಟ್ಟು ರೂ 6,000/– ಗಳನ್ನು ಮೀರ ತಕ್ಕದ್ದಲ್ಲ.

ಸರ್ಕಾರಿ ನೌಕರನ ಮೇಲೆ ಸಂಪೂರ್ಣವಾಗಿ ಅವಲಂಭಿಸಿರುವ ಮಕ್ಕಳು (ಮಲ–ಮಕ್ಕಳು ಒಳಗೊಂಡಂತೆ) ಸರ್ಕಾರಿ ನೌಕರನು ತನ್ನ ಕುಟುಂಬದ ಸದಸ್ಯರ ಅವಲಂಭನೆಯ ಕುರಿತು ಪ್ರಮಾಣಿತ ಘೋಷಣೆಯನ್ನು ಸಲ್ಲಿಸತಕ್ಕದ್ದು.

ಸರ್ಕಾರೀ ಪ್ರಾಯೋಜಕತ್ವ ಯಾವುದೇ ಇತರೆ ಆರೋಗ್ಯ ಯೋಜನೆಗಳಲ್ಲಿ ಮೇಲೆ ಉಲ್ಲೇಖಿಸಿರುವ ಏಳು ತರಹದ ಕಾಯಿಲೆಗಳಿಗೆ ನಿಧಿಪಡಿಸಿರುವ 449 ಚಿಕಿತ್ಸಾ ವಿಧಾನಗಳಲ್ಲಿ ಈ ಹಿಂದೆಯೇ ವೈದ್ಯಕೀಯ ಸೌಲಭ್ಯವನ್ನು ಪಡೆದಿದ್ದಲ್ಲಿ , ಅಂತಹ ಸರ್ಕಾರಿ ನೌಕರರು ಈ ಯೋಜನೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಈ ಯೋಜನೆಯನ್ನು ರಾಜ್ಯದ ಎಲಾ ಸರ್ಕಾರಿ ನೌಕರರಿಗೆ ಮತ್ತು ಅವರ ಅವಲಂಭಿತ ಕುಟುಂಬದ ಸದಸ್ಯರಿಗೆ ನೋಂದಾಯಿತ ನೆಟ್‌ವರ್ಕ್ ಆಸ್ಪತ್ರೆಗಳ ಮೂಲಕ, ವೈದ್ಯಕೀಯ ಆರ್ಥಿಕ ನೆರವಿಗೆ ಯಾವುದೇ ಗರಿಷ್ಟ ಮಿತಿಯಿಲ್ಲದಂತೆ, ಆರೋಗ್ಯಭರವಸೆಯ ವಿಧಾನದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯು ಅನುಷ್ಠಾನಗೊಳಿಸತಕ್ಕದ್ದು. ಈ ಕೆಳಕಾಣಿಸಿದ ಸಂದರ್ಭಗಳನ್ನು ಹೊರತುಪಡಿಸಿ ಫಲಾನುಭವಿಗಳಿಗೆ ಒದಗಿಸುವ ವೈದ್ಯಕೀಯ ನೆರವು ಸಂಪೂರ್ಣವಾಗಿ ನಗದು ರಹಿತವಾಗಿರತಕ್ಕದ್ದು.

ಯೋಜನೆಯಲ್ಲಿ ನಿಗಧಿಪಡಿಸಿರುವ ಬೆನಿಫಿಟ್ ಪ್ಯಾಕೇಜ್‌ನ ದರಗಳಿಗಿಂತ ಹೆಚ್ಚು ದರದ ಸ್ಟೆಂಟ್, ಪ್ರೋಸ್ತೆಸಿಸ್ ಮತ್ತು ಇಂಪ್ಲಾಂಟ್ಸ್‌ಗಳ ಅಳವಡಿಕೆಯನ್ನು ಫಲಾನುಭವಿಯು ಬಯಸಿದ್ದಲ್ಲಿ/ಆಯ್ಕೆ ಮಾಡಿಕೊಂಡಲ್ಲಿ. ಯೋಜನೆಯಲ್ಲಿ ನಿಗಧಿ ಪಡಿಸಿದ ವಾರ್ಡ್ ಸೌಲಭ್ಯಕ್ಕಿಂತ ಉನ್ನತ ದರ್ಜೆಯ ವಾರ್ಡ್ ಸೌಲಭ್ಯಗಳನ್ನು ಫಲಾನುಭವಿಯು ಆಯ್ಕೆ ಮಾಡಿಕೊಂಡಲ್ಲಿ.

ಮೇಲಿನ ಸಂದರ್ಭಗಳಲ್ಲಿ ಫಲಾನುಭವಿಯು ಹೆಚ್ಚುವರಿ ದರಗಳನ್ನು ಭರಿಸತಕ್ಕದ್ದು.

ಜ್ಯೋತಿ ಸಂಜೀವಿನಿ ಯೋಜನೆಯ ಅಡಿಯಲ್ಲಿ ಏಳು ತರಹದ ಗಂಭೀರ ಹಾಗೂ ಮಾರಣಾಂತಿಕ ಖಾಯಿಲೆಗಳಾದ ಹೃದ್ರೋಗ (ಕಾರ್ಡಿಯೋ ಥೋರಾಸಿಕ್/ಕಾರ್ಡಿಯೋವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ ಮತ್ತು ಹೃದಯ ಶಸ್ತ್ರಚಿಕಿತ್ಸಾ ವಿಧಾನವು ಒಳಗೊಂಡಂತೆ), ನರರೋಗ (ಕ್ರೇನಿಯಲ್, ಸ್ಪೈನಲ್ ಮತ್ತು ಪೆರಿಫೆರಲ್ ನರಶಸ್ತ್ರಚಿಕಿತ್ಸೆ ವಿಧಾನಗಳು ಒಳಗೊಂಡಂತೆ), ಕ್ಯಾನ್ಸರ್ (ವೈದ್ಯಕೀಯ ಚಿಕಿತ್ಸೆ, ಶಸ್ತ್ರಚಿಕಿತ್ಸೆ ಮತ್ತು ರೇಡಿಯೇಶನ್ ಒಳಗೊಂಡಂತೆ), ಶಿಶುಗಳ ಶಸ್ತ್ರಚಿಕಿತ್ಸೆ (ನವಜಾತ ಶಿಶುಗಳಿಗೆ ಸಂಬಂಧಿಸಿದಂತೆ) ಅಪಘಾತ (ಬಹು ಅಂಗಗಳು ಒಳಗೊಂಡಂತಹ ಗಾಯ), ಜೆನಿಟೋ ಮೂರಿನರಿ ಶಸ್ತ್ರಚಿಕಿತ್ಸೆಗಳು (ಮೂತ್ರಪಿಂಡ ಮತ್ತು ಕಾಂಜೆನೈಟಲ್ ಜಿನಿಟಲ್ ಕಾಯಿಲೆಗಳು ಒಳಗೊಂಡಂತೆ) ಮತ್ತು ಸುಟ್ಟಗಾಯ (ವಿದ್ಯುತ್ ಅಪಘಾತ ಒಳಗೊಂಡಂತೆ) ಇವುಗಳಿಗೆ ತೃತೀಯ ಹಂತದ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲಾಗುವುದು.

ಮೇಲೆ ಕಾಣಿಸಿರುವ ಏಳು ಕಾಯಿಲೆಗಳ ಚಿಕಿತ್ಸೆಗಳಿಗಾಗಿ ಒಟ್ಟು 449 ಚಿಕಿತ್ಸಾ/ಶಸ್ತ್ರಚಿಕಿತ್ಸಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಬೆನಿಫಿಟ್ ಪ್ಯಾಕೇಜ್‌ನಲ್ಲಿ ವೈದ್ಯಕೀಯ ಸಮಾಲೋಚನೆ, ಚಿಕಿತ್ಸಾ ಪೂರ್ವದ ಪರೀಕ್ಷೆಗಳು, ಚಿಕಿತ್ಸೆಯ ವೆಚ್ಚ, ಊಟೋಪಚಾರ, ಆಸ್ಪತ್ರೆಯ ವೆಚ್ಚ ಹಾಗೂ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ 10 ದಿನಗಳಿಗೆ ಬೇಕಾಗುವ ಔಷಧಿ ಸೌಲಭ್ಯಗಳೂ ಒಳಗೊಂಡಿರುತ್ತವೆ. ಬೆನಿಫಿಟ್ ಪ್ಯಾಕೇಜ್‌ನಲ್ಲಿ ನಿಗಧಿಪಡಿಸಿರುವ ಇಂಪ್ಲಾಂಟ್ಸ್, ಸ್ಟೆಂಟ್ಸ್ ಇತ್ಯಾದಿಗಳ ಗರಿಷ್ಠ ದರಗಳಿಗಿಂತ ಹೆಚ್ಚುವರಿ ದರದ ವ್ಯತ್ಯಾಸದ ಹಣವನ್ನು ಫಲಾನುಭವಿ ಭರಿಸತಕ್ಕದ್ದು

ಇದಲ್ಲದೆ, ಫಲಾನುಭವಿಯು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನಿಗದಿತ ಖಾಯಿಲೆಗಳಿಗೆ ಸಂಬಂಧಿಸಿದಂತೆ 60 ಅನುಸರಣಾ ಚಿಕಿತ್ಸಾ ಸೌಲಭ್ಯಗಳು ಸಹ (ವೈದ್ಯಕೀಯ ಸಮಾಲೋಚನೆ, ಡಯಗ್ನೋಸ್ಟಿಕ್ಸ್ ಮತ್ತು ಔಷದೋಪಚಾರ ಒಳಗೊಂಡಂತೆ) ಈ ಯೋಜನೆಯಡಿಯಲ್ಲಿ ಲಭ್ಯವಿರುತ್ತವೆ. ವಿವರಗಳು ಈ ಕೆಳಕಂಡಂತಿವೆ.

ಫಲಾನುಭವಗಳಿಗೆ ಉತ್ತಮ ಗುಣಮಟ್ಟ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲು ನೆರವಾಗುವಂತೆ ರಾಜ್ಯದಲ್ಲಿ (ಹಾಗೂ ರಾಜ್ಯದ ಗಡಿಭಾಗಕ್ಕೆ ಸಮೀಪವಿರುವ ನೆರೆ ರಾಜ್ಯಗಳು ಸೇರಿದಂತೆ) ಅತ್ಯುತ್ತಮ ದರ್ಜೆಯ 110 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಯೋಜನೆಯೊಂದಿಗೆ ನೋಂದಣೆ ಮಾಡಿಕೊಳ್ಳಲಾಗಿದೆ. ಈ

ನೋಂದಾಯಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಮೂಲಕ ಫಲಾನುಭವಿಗಳಿಗೆ ಚಿಕಿತ್ಸೆ ಒದಗಿಸಲಾಗುತ್ತದೆ. ಅರ್ಹ ಆಸ್ಪತ್ರೆಗಳ ಗುರುತಿಸುವಿಕೆ ಮತ್ತು ನೋಂದಣಿ ಪ್ರಕ್ರಿಯೆಯು ಸಂದರ್ಭಕ್ಕನುಗುಣವಾಗಿ ನಿರಂತರವಾದ ಪ್ರಕ್ರಿಯೆಯಾಗಿರುತ್ತದೆ.

ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿಯಲ್ಲಿ ಪ್ರಸ್ತುತವಾಗಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನೊಂದಿಗೆ ನೋಂದಣೆಯಾಗಿರುವ ಹಾಗೂ ನೋಂದಣೆಯಾಗುವ ನೆಟ್‌ವರ್ಕ್ ಆಸ್ಪತ್ರೆಗಳು ಮಾತ್ರ ಜ್ಯೋತಿ ಸಂಜೀವಿನಿ ಯೋಜನೆಯಡಿಯಲ್ಲಿ ನೋಂದಣಿಯಾಗಲು ಅರ್ಹವಾಗಿರುತ್ತವೆ.

ವೇತನ ಶ್ರೇಣಿಗನುಗುಣವಾಗಿ ಸರ್ಕಾರಿ ನೌಕರರು ಈ ಕೆಳಕಂಡ ವಾರ್ಡ್‌ಗಳಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ. ಮಾಸಿಕ ಮೂಲ ವೇತನ ರೂ 16,000/- ದವರೆಗೆ ಸಾಮಾನ್ಯ ವಾರ್ಡ್, ಮಾಸಿಕವಾಗಿ ರೂ 16,000 ದಿಂದ ರೂ 43,000/- ಅರೆ ಖಾಸಗಿ ವಾರ್ಡ್, ರೂ 43,201 ಮತ್ತು ಮೇಲ್ಪಟ್ಟು - ಖಾಸಗಿ ವಾರ್ಡ್.

ಸಾಮಾನ್ಯ ಅರೆ-ಖಾಸಗಿ ಮತ್ತು ಖಾಸಗಿ ವಾರ್ಡ್ ದರಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯು ನಿಗಿಧಿಗೊಳಿಸತಕ್ಕದ್ದು. ನಿಗಧಿಗೊಳಿಸಿದ ದರಗಳನ್ವಯ ವಾರ್ಡ್ ದರಗಳ ಬಿಲ್ ಮಾಡತಕ್ಕದ್ದು.

ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೆಚ್‌ಆರ್‌ಎಂಎಸ್ ಡಾಟಾ ಬೇಸ್‌ನೊಂದಿಗೆ ಸಮನ್ವಯಗೊಂಡಿರುವ ಸರ್ಕಾರಿ ನೌಕರನ ಕೆಜಿಐಡಿ ಪಾಲಿಸಿ ಸಂಖ್ಯೆಯು ಅಂತಹ ಸರ್ಕಾರಿ ನೌಕರನ ಗುರುತಿನ ಮಾನದಂಡವಾಗಿರುತ್ತದೆ. ಸರ್ಕಾರಿ ನೌಕರರ ಮತ್ತು ಅವರ ಅವಲಂಭಿತರ ಕುಟುಂಬದ ಸದಸ್ಯರನ್ನು ಡಾಟಾ ಬೇಸ್ ಮೂಲಕ ಗುರುತಿಸಲು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಗೆ ಸರ್ಕಾರವು ಅವಕಾಶ ನೀಡತಕ್ಕದ್ದು.

ಈ ಯೋಜನೆಯು ಅನುಷ್ಠಾನಕ್ಕಾಗಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಂಸ್ಥೆಯು ಅನುಷ್ಠಾನ ನೆರವು ಸಂಸ್ಥೆಯೊಂದರ ಸೇವೆಯನ್ನು ಪಡೆದುಕೊಂಡಿರುತ್ತದೆ. ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳ ನಿರ್ವಹಣೆ, ಅರ್ಹ ಆಸ್ಪತ್ರೆಗಳ ನೋಂದಣಿ, ಹಣ ಪಾವತಿ ವ್ಯವಸ್ಥೆಯನ್ನು ರೂಪಿಸುವುದು. ಆರೋಗ್ಯ ಮಿತ್ರರನ್ನು ನೇಮಕಾತಿ ಮಾಡಿ ಸೂಕ್ತ ತರಬೇತಿ ನಂತರ ನೊಂದಾಯಿತ ಆಸ್ಪತ್ರೆಗಳಿಗೆ ನೇಮಿಸುವುದು. ಸಹಾಯವಾಣಿ ಕೇಂದ್ರಗಳ ಸ್ಥಾಪನೆ ಮಾಡುವುದು, ಪ್ರೀಯಾತ್ ಮತ್ತು ಕ್ಲೈಂ ನಿರ್ವಹಣಾ ವ್ಯವಸ್ಥೆ ಮಾಡುವುದು ಮತ್ತು ಆರೋಗ್ಯ ಸೇವೆ ಒದಗಿಸುವ ಸಂಸ್ಥೆಗಳ ಉಸ್ತುವಾರಿ ಮತ್ತು ಮೌಲ್ಯ ಮಾಪನ ಮಾಡುವುದು ಇತ್ಯಾದಿ ಚಟುವಟಿಕೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವುದು ಅನುಷ್ಠಾನ ನೆರವು ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ.

ಆರೋಗ್ಯ ಮಿತ್ರರು, ರಾಜ್ಯದ ಎಲ್ಲ ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು, ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳು ಹಾಗೂ ನೋಂದಾಯಿತ ಸೂಪರ್ ಸ್ಪೆಚಾಲಿಟಿ ಆಸ್ಪತ್ರೆಗಳಲ್ಲಿ (ನೆಟ್‌ವರ್ಕ್ ಆಸ್ಪತ್ರೆಗಳು) ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಆರೋಗ್ಯ ಮಿತ್ರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಆರೋಗ್ಯ ಮಿತ್ರರು ಚಿಕಿತ್ಸೆ ಅಗತ್ಯವಿರುವ ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಭಿತ ಸದಸ್ಯರಿಗೆ ಚಿಕಿತ್ಸೆ ಪಡೆದುಕೊಳ್ಳಲು ಅನುಕೂಲವಾಗುವಂತೆ ಸೂಕ್ತ ಮಾರ್ಗದರ್ಶನ ಹಾಗೂ ಸಹಾಯ ನೀಡುತ್ತಾರೆ.

– ಮಂಜುನಾಥ ಬಾಬು ಟಿ.ಸಿ.
ಸಹಾಯಕ ನಿರ್ದೇಶಕರು

ಬಾಬು:ಜಿಪಿಆರ್